**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು**

**ಸಿಸಿ ನಂ.774/2021**

**ಫಿರ್ಯಾದುದಾರರು:** ರೇಖಾ.ಪಿ., ಬಿನ್ ಪುಟ್ಟೇಗೌಡ, ಸುಮಾರು ವಯಸ್ಸು 44 ವರ್ಷ, ವಾಸ: ಕೇರ್ ಆಫ್ ಲವಕುಮಾರ್.ಪಿ., ಹನಗೋಡು ಗ್ರಾಮ, ಹನಗೋಡು ಹೋಬಳಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

**– ವಿರುದ್ಧ –**

**ಆರೋಪಿ:** ಶಂಕರ್, ಬಿನ್ ವೆಂಕಟೇಗೌಡ, ಸುಮಾರು ವಯಸು 42ವರ್ಷ, ವಾಸ: ಇಂಡಗೂಡ್ಲು ಗ್ರಾಮ, ಹನಗೋಡು ಅಂಚೆ, ಹನಗೋಡು ಅಂಚೆ, ಹನಗೋಡು ಹೋಬಳಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ**

| | |
|---|---|
| ಪ್ರಶ್ನೆ 1: | ಫಿರ್ಯಾದುದಾರರಾದ ರೇಖಾ.ಪಿ. ರವರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ? |
| ಉತ್ತರ: | ತಿಳಿದಿದೆ |
| ಪ್ರಶ್ನೆ 2: | ಪಿ.ಡಬ್ಲ್ಯೂ1 ರೇಖಾ.ಪಿ.ರವರು ತಮ್ಮ ಸಾಕ್ಷ್ಯದಲ್ಲಿ, ನೀವು ಮತ್ತು ಅವರು ಸಂಬಂಧಿಕರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 3: | ಪಿ.ಡಬ್ಲ್ಯೂ1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನೀವು ನಿಮ್ಮ ದರದ್ದು ನಿಮಿತ್ತ ಅಂದರೆ ಹಿಂದೆ ಮಾಡಿದ ಗೃಹಕೃತ್ಯದ ಖರ್ಚಿಗಾಗಿ ಮತ್ತು ಕೈ ಸಾಲಗಳನ್ನು ತೀರಿಸುವ ಸಲುವಾಗಿ ಅವರಿಂದ ಫೆಬ್ರವರಿ ತಿಂಗಳು 2016 ರಂದು ರೂ.5,00,000/- ಗಳನ್ನು 4 ತಿಂಗಳಲ್ಲಿ ವಾಪಸ್ಸು ಕೊಡುತ್ತೇನೆಂದು ಸಾಲವಾಗಿ ಪಡೆದುಕೊಂಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |

| | |
|---|---|
| ಉತ್ತರ: | ಸುಳ್ಳು |
| ಪ್ರಶ್ನೆ 4: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದರಿ ಸಾಲದ ಹಣವನ್ನು 4 ತಿಂಗಳು ವಾಯಿದೆ ಕಳೆದರೂ ಮರುಪಾವತಿ ಮಾಡಿದಿದ್ದ ಕಾರಣ ನೀವು ಸಾಲದ ಹಣವನ್ನು ಮರುಪಾವತಿಸುವಂತೆ ಹಲವಾರು ಬಾರಿ ಕೇಳಿದಾಗ ನೀವು ಸದರಿ ಸಾಲದ ಮರುಪಾವತಿಗಾಗಿ 10.12.2020 ರ ದಿನಾಂಕ ನಮೂದಿಸಿದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬಿ.ಎಮ್.ರಸ್ತೆ, ಹುಣಸೂರು ಶಾಖೆಯ ಚೆಕ್ ಸಂಖ್ಯೆ: 269606 ಅನ್ನು ರೂ.5,00,000/-ಗಳಿಗೆ ನೀಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 5: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಚೆಕ್ ಅನ್ನು ಅವರು ದಿನಾಂಕಃ 29.12.202ರಂದು ತಮ್ಮ ಬ್ಯಾಂಕ್ ಇರುವ ಬ್ಯಾಂಕ್ ಆಫ್ ಬರೋಡಾ, ಹುಣಸೂರು ಶಾಖೆಯ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ "Exceeds Arrangement" ಎಂಬ ಕಾರಣಕ್ಕಾಗಿ ಸದರಿ ಚೆಕ್ ಅಮಾನ್ಯಗೊಂಡು ದಿನಾಂಕಃ 01.01.2021 ರಂದು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸಾಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 6: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಈ ಬಗ್ಗೆ ನಿಮಗೆ ಫೋನಿನ ಮೂಲಕ ಕರೆ ಮಾಡಿ ತಿಳಿಸಿದಾಗ ನೀವು ದಿನಾಂಕಃ 20.01.2021ರಂದು ಪುನಃ ಚೆಕ್ಕನ್ನು ಬ್ಯಾಂಕಿಗೆ ಹಾಕಲು ಸೂಚಿಸಿದ ಮೇರೆಗೆ ಅವರು ದಿನಾಂಕಃ 22.01.2021ರಂದು ತಮ್ಮ ಬ್ಯಾಂಕ್ ಇರುವ ಬ್ಯಾಂಕ್ ಆಫ್ ಬರೋಡಾ, ಹುಣಸೂರು ಶಾಖೆಯ ಮೂಲಕ ನಗದೀಕರಣಕ್ಕಾಗಿ ಪುನಃ ಹಾಜರುಪಡಿಸಿದಾಗ "Exceeds |

| | |
|---|---|
| | Arrangement" ಎಂಬ ಕಾರಣಕ್ಕಾಗಿ ಸದರಿ ಚೆಕ್ ಅಮಾನ್ಯಗೊಂಡು ದಿನಾಂಕಃ 29.01.2021 ರಂದು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸಾಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 7: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಈ ಬಗ್ಗೆ ದಿನಾಂಕ 12.02.2021ರಂದು ಅವರು ನಿಮಗೆ ತಮ್ಮ ವಕೀಲರ ಮೂಲಕ ನೊಂದಾಯಿತ ಅಂಚೆಯ ಮೂಲಕ ನೋಟೀಸನ್ನು ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 8: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ನೋಟೀಸ್ ನ್ನು ನೀವು ಉದ್ದೇಶಪೂರ್ವಕವಾಗಿ ತಿರಸ್ಕರಿಸಿರುತ್ತೀರಿ ಹಾಗು ಸದರಿ ನೋಟೀಸು ದಿನಾಂಕಃ 24.02.201ರಂದು ವಾಪಾಸ್ ಆಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 9: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಈ ಬಗ್ಗೆ ಮಾಹಿತಿ ಇದ್ದರೂ ಸಹ ನೀವು ಫಿರ್ಯಾದುದಾರರಿಗೆ ನೀಡಬೇಕಾದ ಚೆಕ್ಕಿನ ಹಣವನ್ನು ಉದ್ದೇಶಪೂರ್ವಕವಾಗಿ ಮರುಪಾವತಿಸಿಲ್ಲ ಹಾಗು ನೋಟೀಸ್‌ಗೆ ಉತ್ತರವನ್ನು ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 10: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆದರೂ ಸಹ ನೀವು ಈವರೆಗೂ ಸಾಲದ ಹಣವನ್ನು ಮರುಪಾವತಿಸದೆ ಇರುವುದರಿಂದ ನೆಗೋಶಿಯೆಬಲ್ ಇನ್ಸ್ಟುಮೆಂಟ್ಸ್ ಕಾಯಿದೆಯ ಕಲಂ 138ರ |

| | |
|---|---|
| | ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 11: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನೀವು ಅವರಿಗೆ ನೀಡಿದ ಚೆಕ್, ಬ್ಯಾಂಕಿನವರು ನೀಡಿದ ಹಿಂಬರಹಗಳು, ವಕೀಲರ ಮೂಲಕ ನೀಡಿದ ನೋಟೀಸಿನ ಕಚೇರಿ ಪ್ರತಿ, ಅಂಚೆ ರಶೀದಿ ಮತ್ತು ದೂರನ್ನು ನಿಪಿ–1 ರಿಂದ ನಿಪಿ–6 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 12: | ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ? |
| ಉತ್ತರ: | ಇದೆ |
| ಪ್ರಶ್ನೆ 13: | ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ? |
| ಉತ್ತರ: | ಇದೆ |

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಮತ್ತು ಸರಿಯಾಗಿದೆಯೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 25.02.2026.

Sd/-

(ಅನಿತ)

ANITHA Digitally signed by ANITHA Date: 2026.02.25 15:53:08 +0530

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ., ಹುಣಸೂರು.**

ಆರೋಪಿಯ ಸಹಿಃ